# ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
# KARNATAK UNIVERSITY DHARWAD
## ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
## EXAMINATION SECTION
Confidential Branch, 2nd Floor, Examination Bhavan

Website: www.kud.ac.in
e-mail: confidential@kud.ac.in
☎: (0836) 2215259


ನಂ.ಕವಿವಿ/ಪರೀಕ್ಷಾ-ಗೌಪ್ಯ/2023/110

ದಿನಾಂಕ :01.08.2023

## ಸುತ್ತೋಲೆ

ವಿಷಯ: ಅಗಸ್ಟ್/ಸಪ್ಟೆಂಬರ–2023ರಲ್ಲಿ ಜರುಗುವ ಸ್ನಾತಕ (NEP) 2ನೇ / 4ನೇ ಸೆಮಿಸ್ಟರ್ ಪದವಿ ಪ್ರಾಯೋಗಿಕ ಪರೀಕ್ಷೆಗಳನ್ನು ಅಗಸ್ಟ್–2023ರಲ್ಲಿ ಜರುಗಿಸುವ ಕುರಿತು.

ಉಲ್ಲೇಖ:ಸಮಿತಿ ವರದಿ ದಿನಾಂಕ.31–07–2023

****

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಿಗಳಿಗೆ ಸಂಬಂಧಿಸಿದಂತೆ, ಈ ಮೂಲಕ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅಡಿಯಲ್ಲಿ ಜಾರಿಯಲ್ಲಿರುವ ಎಲ್ಲ ಸ್ನಾತಕ ಪದವಿ ತರಗತಿಗಳ 2ನೇ / 4ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿಯನ್ನು ದಿನಾಂಕ.16.08.2023 ರಿಂದ ದಿನಾಂಕ.24.08.2023 ರವರೆಗೆ ಜರುಗಿಸಲು ಸೂಚಿಸಲಾಗಿದೆ. ಪ್ರಾಯೋಗಿಕ ಪರೀಕ್ಷೆಯ ಪ್ರಾರಂಭಕ್ಕಿಂತ ಮುಂಚಿತವಾಗಿ ಈ ಕೆಳಗಿನ ಹಂತಗಳನ್ನು ಕಡ್ಡಾಯವಾಗಿ ಪೂರೈಸುವುದು.

1. ದಿನಾಂಕ: 05.08.2023 ರೊಳಗಾಗಿ ಹಾಜರಾತಿಯನ್ನು UUCMS ತಂತ್ರಾಂಶದಲ್ಲಿ ನೊಂದಾಯಿಸುವುದು.
2. ದಿನಾಂಕ: 05.08.2023ರೊಳಗಾಗಿ ಪರೀಕ್ಷಾ ಅರ್ಜಿಯನ್ನು ತುಂಬಿದ ವಿದ್ಯಾರ್ಥಿಗಳ ಮಾಹಿತಿಯನ್ನು Principal login ನಲ್ಲಿ ಪ್ರಾಚಾರ್ಯರರು UUCMS ತಂತ್ರಾಂಶದಲ್ಲಿ ತಪ್ಪದೇ ಅನುಮೋದಿಸುವುದು.
3. ದಿನಾಂಕ: 07.08.2023 ರಿಂದ 10.08.2023ರೊಳಗಾಗಿ ವಿದ್ಯಾರ್ಥಿಗಳ ಪ್ರವೇಶ ಪತ್ರವನ್ನು UUCMS ತಂತ್ರಾಂಶದಿಂದ ಕಡ್ಡಾಯವಾಗಿ ಡೌನಲೋಡ್ ಮಾಡಿಕೊಳ್ಳುವುದು. (**ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳದಿದ್ದರೆ ವಿದ್ಯಾರ್ಥಿಗಳ ಅಂಕಗಳನ್ನು ನಮೂದಿಸಲು ಸಾಧ್ಯವಾಗುವುದಿಲ್ಲ**).
4. ದಿನಾಂಕ: 05.08.2023 ರಿಂದ 09.08.2023ರೊಳಗಾಗಿ ಮಹಾವಿದ್ಯಾಲಯದ Admin login ನಲ್ಲಿ ಗರಿಷ್ಠ ತಲಾ 20 ವಿದ್ಯಾರ್ಥಿಗಳಂತೆ ಬ್ಯಾಚ್‌ಗಳನ್ನು ರಚಿಸುವುದು. **ವಿ.ಸೂ: ಬ್ಯಾಚ್‌ಗಳನ್ನು Outside UUCMS ನಲ್ಲಿ ಮಾಡತಕ್ಕದ್ದಲ್ಲ.**
5. ದಿನಾಂಕ: 10.08.2023 ರಿಂದ 11.08.2023ರೊಳಗಾಗಿ ಸಂಬಂಧಪಟ್ಟ ವಿಷಯದ ಬಿ.ಓ.ಎ.ಇ. ಅಧ್ಯಕ್ಷರುಗಳು UUCMS ನಲ್ಲಿ ಬ್ಯಾಚ್‌ಗಳನ್ನು ಅನುಮೋದಿಸುವುದು.
6. ದಿನಾಂಕ: 12.08.2023 ರಿಂದ 14.08.2023ರೊಳಗಾಗಿ ಸಂಬಂಧಪಟ್ಟ ವಿಷಯದ ಬಿ.ಓ.ಎ.ಇ. ಅಧ್ಯಕ್ಷರುಗಳು UUCMS ನಲ್ಲಿ ಕಡ್ಡಾಯವಾಗಿ ಬಾಹ್ಯ ಪರೀಕ್ಷಕರನ್ನು ನೇಮಿಸುವುದು.
7. ದಿನಾಂಕ: 16.08.2023 ರಿಂದ 24.08.2023 ರ ಅವಧಿಯಲ್ಲಿ ಪರೀಕ್ಷೆಗಳನ್ನು ಜರುಗಿಸಿ ಆಯಾ ದಿನದ ಬ್ಯಾಚುಗಳ ಪ್ರಾಯೋಗಿಕ ಅಂಕಗಳನ್ನು ಅದೇ ದಿನದಂದು UUCMS ನಲ್ಲಿ ಕಡ್ಡಾಯವಾಗಿ ನಮೂದಿಸುವುದು. **ವಿ.ಸೂ: ಪರೀಕ್ಷೆ ಜರುಗಿದ ಮರುದಿನ ಅಂಕಗಳನ್ನು ನಮೂದಿಸಲು ಸಾಧ್ಯವಾಗುವುದಿಲ್ಲ.**
8. ಸಂಬಂಧಪಟ್ಟ ವಿಷಯದ ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯಗೊಂಡ ನಂತರ ಅಂಕಗಳ ಯಾದಿಯನ್ನು ದ್ವಿ ಪ್ರತಿಯಲ್ಲಿ ಸಿದ್ಧಪಡಿಸಿ ಒಂದು ಪ್ರತಿಯನ್ನು ಗಣಕಯಂತ್ರ ವಿಭಾಗದ ಮುಖ್ಯಸ್ಥರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಸಂಬಂಧಿಸಿದ ಪರೀಕ್ಷಾ ವಿಭಾಗದ ಅಧೀಕ್ಷಕರಿಗೆ ಮೂರು ದಿನಗಳೊಳಗಾಗಿ ಕಳುಹಿಸಲು ಸೂಚಿಸಲಾಗಿದೆ.

**ವಿ.ಸೂ: ಆಂತರಿಕ ಪರೀಕ್ಷರನ್ನು ಸಂಬಂಧಪಟ್ಟ ಮಹಾವಿದ್ಯಾಲಯದ ಶಿಕ್ಷಕರು ನಿರ್ವಹಿಸುವುದು. ಯಾವುದೇ ಕಾರಣಕ್ಕೂ ಬಾಹ್ಯ ಪರೀಕ್ಷಕರಿಲ್ಲದೇ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸತಕ್ಕದ್ದಲ್ಲ. ಒಂದು ವೇಳೆ ಆಂತರಿಕ ಪರೀಕ್ಷಕರು ಲಭ್ಯವಿಲ್ಲದಿದ್ದಲ್ಲಿ ಇಬ್ಬರು ಬಾಹ್ಯ ಪರೀಕ್ಷಕರನ್ನು ನೇಮಿಸಿಕೊಂಡು ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವುದು. ಇಂತಹ ಸಂದರ್ಭದಲ್ಲಿ ಹೆಚ್ಚುವರಿ ಬಾಹ್ಯ ಪರೀಕ್ಷಕರನ್ನು ಸಂಬಂಧಪಟ್ಟ ಬಿ.ಓ.ಎ.ಇ ಅಧ್ಯಕ್ಷರುಗಳಿಂದ ನೇಮಿಸಿಕೊಳ್ಳುವುದು.**

ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಸಂಬಂಧಿಸಿದ ಎಲ್ಲ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವುದು. ತಪ್ಪಿದಲ್ಲಿ ಸಂಬಂಧಿಸಿದ ಪ್ರಾಚಾರ್ಯರೇ ಹೊಣೆಗಾರರು.

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

**ಪ್ರತಿ ಮಾಹಿತಿಗಾಗಿ :**

1. ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
2. ಉಪಕುಲಸಚಿವರು, ವಿದ್ಯಾಮಂಡಳ/ಪರೀಕ್ಷಾ ವಿಭಾಗ, ಕ.ವಿ.ವಿ., ಧಾರವಾಡ.
3. ಸಹಾಯಕ ಕುಲಸಚಿವರು, ವಿದ್ಯಾಮಂಡಳ/ಪರೀಕ್ಷಾ ವಿಭಾಗ, ಕ.ವಿ.ವಿ., ಧಾರವಾಡ.
4. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ. ಸದರ ಸುತ್ತೋಲೆಯನ್ನು ಕವಿವಿ ಅಂತರ್ಜಾಲದಲ್ಲಿ ಪ್ರಕಟಿಸುವುದು.
5. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
7. ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
8. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.